ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 31-12-1970.

*<u>ಅಮೃತ ವೇಳೆಯಿಂದ ಪರಿವರ್ತನಾ ಶಕ್ತಿಯ ಪ್ರಯೋಗ</u>* (अमृतवेले से परिवर्तन शक्ति का प्रयोग)

ಇಂದು ಬಾಪ್ ದಾದಾ ವರ್ತಮಾನ ಮತ್ತು ಭವಿಷ್ಯದ ರಾಜ್ಯ ಅಧಿಕಾರಿ ಎಂದರೆ ವಿಶ್ವಕಲ್ಯಾಣಕಾರಿ ಮತ್ತು ವಿಶ್ವರಾಜ್ಯ ಅಧಿಕಾರಿ ಎರಡೂ ರೂಪದಲ್ಲಿ ಮಕ್ಕಳನ್ನು ನೋಡುತ್ತಿದ್ದಾರೆ. ಎಷ್ಟು ವಿಶ್ವಕಲ್ಯಾಣಕಾರಿಯೋ ಅಷ್ಟೇ ವಿಶ್ವರಾಜ್ಯಾಧಿಕಾರಿಯಾಗುತ್ತಾರೆ. ಈ ಎರಡೂ ಅಧಿಕಾರಗಳನ್ನು ಪ್ರಾಪ್ತಿ ಮಾಡಿಕೊಳ್ಳಲು ವಿಶೇಷ ಸ್ವ-ಪರಿವರ್ತನೆಯ ಶಕ್ತಿಬೇಕು. ಪರಿವರ್ತನೆಯ ಶಕ್ತಿಯನ್ನು ಅಮೃತವೇಳೆಯಿಂದ ರಾತ್ರಿಯವರೆಗೆ ಹೇಗೆ ಕಾರ್ಯದಲ್ಲಿ ವಿನಿಯೋಗಿಸುವುದು ಎಂದು ಆ ದಿನವೂ ಹೇಳಿದ್ದೆವು.

**ಮೊದಲ ಪರಿವರ್ತನೆ* – ಕಣ್ಣು ತೆರೆಯುತ್ತಲೇ "ನಾನು ಶರೀರವಲ್ಲ, ಆತ್ಮನಾಗಿದ್ದೇನೆ"** ಇದಾಗಿದೆ. ಆದಿ ಸಮಯದ ಆದಿ ಪರಿವರ್ತನೆಯ ಸಂಕಲ್ಪ, ಇದೇ ಆದಿ ಸಮಯದ ಸಂಕಲ್ಪದ ಜೊತೆಗೆ ಇಡೀ ದಿನದ ದಿನಚರಿಯ ಆಧಾರವಿದೆ. ಆದಿ ಸಂಕಲ್ಪದಲ್ಲಿ ಪರಿವರ್ತನೆಯಾಗದಿದ್ದರೆ ಇಡೀ ದಿನ ಸ್ವರಾಜ್ಯ ಅಥವಾ ವಿಶ್ವಕಲ್ಯಾಣದಲ್ಲಿ ಸಫಲರಾಗುವುದಿಲ್ಲ. ಆದಿ ಸಮಯದಿಂದ ಪರಿವರ್ತನೆಯ ಶಕ್ತಿಯನ್ನು ಕಾರ್ಯದಲ್ಲಿ ತನ್ನಿ, ಹೇಗೆ ಸೃಷ್ಟಿಯ ಆದಿಯಲ್ಲಿ ಬ್ರಹ್ಮನಿಂದ ದೇವಾತ್ಮ ಸತೊಪ್ರಧಾನ ಆತ್ಮ ಪಾತ್ರದಲ್ಲಿ ಬರುವರೋ ಅದೇ ರೀತಿ ನಿತ್ಯವೂ ಅಮೃತವೇಳೆ ಆದಿಕಾಲವಾಗಿದೆ. ಆದ್ದರಿಂದ ಈ ಆದಿಕಾಲದ ಸಮಯ ಏಳುತ್ತಲೇ ನೆನಪಿನಲ್ಲಿಯ ಮೊದಲ ಸಂಕಲ್ಪ- **"ಬ್ರಾಹ್ಮಣ ಆತ್ಮನಾದ ನಾನು ತಂದೆಯೊಂದಿಗೆ ಮಿಲನ ಮಾಡಲು ಅವತರಿಸಿದ್ದೇನೆ."** ಇದೇ ಸಮರ್ಥ ಸಂಕಲ್ಪ ಅಥವಾ ಶ್ರೇಷ್ಠ ಸಂಕಲ್ಪ ಶ್ರೇಷ್ಠ ಮಾತು ಮತ್ತು ಶ್ರೇಷ್ಠ ಕರ್ಮದ ಆಧಾರವಾಗುವುದು. ಮೊದಲ ಪರಿವರ್ತನೆ - "ನಾನು ಯಾರು". ಆದ್ದರಿಂದ ಇದೇ ತಳಹದಿ ಪರಿವರ್ತನಾ ಶಕ್ತಿಯ ಆಧಾರವಾಗಿದೆ. ಇದಾದ ಮೇಲೆ.....

**ಎರಡನೆಯ ಪರಿವರ್ತನೆ- "ನಾನು ಯಾರವನಾಗಿದ್ದೇನೆ" ಎಲ್ಲಾ ಸಂಬಂಧಗಳು ಯಾರೊಂದಿಗೆ ಇವೆ, ಎಲ್ಲಾ ಪ್ರಾಪ್ತಿಗಳು ಯಾರೊಂದಿಗಿವೆ? ಮೊದಲು ದೇಹದ ಪರಿವರ್ತನೆ ನಂತರ ದೇಹದ ಸಂಬಂಧದ ಪರಿವರ್ತನೆ, ನಂತರ ಸಂಬಂಧದ ಆಧಾರದ ಮೇಲೆ ಪ್ರಾಪ್ತಿಗಳ ಪರಿವರ್ತನೆ - ಈ ಪರಿವರ್ತನೆಯನ್ನೇ ಸಹಜ ನೆನಪು ಎಂದು ಕರೆಯಲಾಗುತ್ತದೆ. ಆದ್ದರಿಂದ ಆದಿಯಲ್ಲಿ ಪರಿವರ್ತನಾ ಶಕ್ತಿಯ ಆಧಾರದ ಮೇಲೆ ಅಧಿಕಾರಿಗಳಾಗಬಲ್ಲಿರಿ. ಅಮೃತವೇಳೆಯ ನಂತರ ತಮ್ಮ ದೇಹದ ಕಾರ್ಯಕ್ರಮವನ್ನು ಮಾಡುತ್ತಾ ನಿರಂತರ ಸಹಜಯೋಗಿ ಆಗುವಂತಹ ಯಾವ ಪರಿವರ್ತನೆಯ ಅವಶ್ಯಕತೆಯಿದೆ? ಸದಾ ಈ ಸಂಕಲ್ಪವನ್ನು ಇಟ್ಟುಕೊಳ್ಳಿ "ನಾನು ಚೈತನ್ಯ ಸರ್ವಶ್ರೇಷ್ಠ ಮೂರ್ತಿಯಾಗಿದ್ದೇನೆ ಮತ್ತು ಇದು ಮಂದಿರವಾಗಿದೆ, ಚೈತನ್ಯ ಮೂರ್ತಿಯ ಈ ದೇಹ ಚೈತನ್ಯ ಮಂದಿರವಾಗಿದೆ. ಮಂದಿರವನ್ನು ಶೃಂಗರಿಸುತ್ತಿದ್ದೇನೆ, ಮಂದಿರದ ಒಳಗೆ ಸ್ವಯಂ ಬಾಪ್ ದಾದಾರ ಪ್ರಿಯ ಮೂರ್ತಿ ವಿರಾಜಮಾನವಾಗಿದೆ. ಆ ಮೂರ್ತಿಯ ಗುಣಗಳ ಮಾಲೆಯನ್ನು ಸ್ವಯಂ ಬಾಪ್ ದಾದಾ ಸ್ಮರಣೆ ಮಾಡುತ್ತಾರೆ. ಈ ಮೂರ್ತಿಯ ಮಹಿಮೆಯನ್ನು ಸ್ವಯಂ ತಂದೆ ಮಾಡುತ್ತಾರೆ ಅಂತಹ ವಿಶೇಷ ಮೂರ್ತಿಯ ವಿಶೇಷ ಮಂದಿರವಾಗಿದೆ"**. ಎಷ್ಟು ಮೂರ್ತಿ ಬೆಲೆಬಾಳುವಂತಹುದೋ ಅಷ್ಟೇ ಮೂರ್ತಿಯ ಆಧಾರದ ಮೇಲೆ ಮಂದಿರದ ಬೆಲೆಯಿರುತ್ತದೆ. ಹಾಗಾದರೆ ಯಾವ ಪರಿವರ್ತನೆ ಮಾಡಬೇಕು? ನನ್ನ ಶರೀರವಲ್ಲ ಆದರೆ ತಂದೆಯೊಂದಿಗೆ ಮಿಲನ ಮಾಡಲು ಬಾಪ್ ದಾದಾರ ಅಮೂಲ್ಯ ಮೂರ್ತಿಯ ಮಂದಿರವಾಗಿದೆ. ಸ್ವಯಂ ಮೂರ್ತಿ, ಸ್ವಯಂ ಮಂದಿರದ ಟ್ರಸ್ಟಿಯಾಗಿ ಮಂದಿರವನ್ನು ಶೃಂಗರಿಸಿ. ಈ ಪರಿವರ್ತನೆಯ ಸಂಕಲ್ಪದ ಆಧಾರದ ಮೇಲೆ ನನ್ನದು ಎಂದರೆ ದೇಹದ ಭಾವನೆ ಪರಿವರ್ತನೆಯಾಗುವುದು.

**ಇದರ ನಂತರ ತಮ್ಮ ಈಶ್ವರೀಯ ವಿದ್ಯಾರ್ಥಿ ರೂಪ ಸದಾ ಸ್ಮೃತಿಯಲ್ಲಿರಲಿ.** ಪ್ರತಿಕ್ಷಣದ ಅಧ್ಯಯನ, ಪ್ರತಿಯೊಂದು ಅಮೂಲ್ಯ ಮಾತಿನ ಧಾರಣೆಯಿಂದ ಪ್ರತಿಕ್ಷಣ ವರ್ತಮಾನ ಮತ್ತು ಭವಿಷ್ಯ ಶ್ರೇಷ್ಠ ಪ್ರಾಲಬ್ಧವಾಗುವಂತಹ ವಿಶೇಷ ಯಾವ ಪರಿವರ್ತನೆಯ ಸಂಕಲ್ಪ ಇದರಲ್ಲಿ ಬೇಕು? ನಾನು ಸಾಧಾರಣ ವಿದ್ಯಾರ್ಥಿಯಲ್ಲ, ಇದು ಸಾಧಾರಣ ಅಧ್ಯಯನವಲ್ಲ ಆದರೆ ತಂದೆ ದೂರದೇಶದಿಂದ ಓದಿಸಲು ಪ್ರತ್ಯಕ್ಷವಾಗಿ ನಿತ್ಯವೂ ಬರುತ್ತಾರೆ. ಈಶ್ವರೀಯ ಮಹಾವಾಕ್ಯಗಳು ನಮ್ಮ ಅಧ್ಯಯನವಾಗಿವೆ. ಶ್ರೀ ಶ್ರೀಯ ಶ್ರೀಮತ ನಮ್ಮ ಅಧ್ಯಯನವಾಗಿದೆ. **ಈ ಅಧ್ಯಯನದ ಪ್ರತಿಯೊಂದು ವಾಕ್ಯ ಪದಮದಷ್ಟು ಸಂಪಾದನೆ ಮಾಡಿಸುವಂತಹುದು. ಒಂದು ವಾಕ್ಯವನ್ನು ಧಾರಣೆ ಮಾಡಿಕೊಳ್ಳದಿದ್ದರೆ ವಾಕ್ಯವನ್ನು ಬಿಡಲಿಲ್ಲ ಆದರೆ ಪದಮದಷ್ಟು ಸಂಪಾದನೆ, ಅನೇಕ ಜನ್ಮಗಳ ಶ್ರೇಷ್ಠ ಪ್ರಾಲಬ್ಧ ಅಥವಾ ಶ್ರೇಷ್ಠ ಪದವಿಯ ಪ್ರಾಪ್ತಿಯಲ್ಲಿ ಕಡಿಮೆ ಮಾಡಿಕೊಂಡೆನು. "ಭಗವಂತ ಮಾತನಾಡುತ್ತಿರುವನು", ನಾವು ಕೇಳುತ್ತಿರುವೆವು, ನನಗಾಗಿ ತಂದೆ ಶಿಕ್ಷಕನಾಗಿ ಬಂದಿರುವರು. ನಾನು ವಿಶೇಷ ಮುದ್ದಿನ ವಿದ್ಯಾರ್ಥಿಯಾಗಿರುವ ಕಾರಣ ನನಗಾಗಿ ಬಂದಿರುವರು ಎಂಬ ಪರಿವರ್ತನೆಯ ಸಂಕಲ್ಪಗಳು.** ಎಲ್ಲಿಂದ ಬಂದಿರುವವು, ಯಾರು ಬಂದಿರುವರು ಮತ್ತು ಏನನ್ನು ಓದಿಸುತ್ತಿರುವರು? ಎಂಬ ಪರಿವರ್ತನೆಯ ಶ್ರೇಷ್ಠ ಸಂಕಲ್ಪ ನಿತ್ಯವೂ ತರಗತಿಯ ಸಮಯದಲ್ಲಿ ಧಾರಣೆ ಮಾಡಿ ಅಧ್ಯಯನ ಮಾಡಿ, ಸಾಧಾರಣ ತರಗತಿಯಲ್ಲ, ಹೇಳುವ ವ್ಯಕ್ತಿಯನ್ನು ನೋಡಬೇಡಿ ಆದರೆ ಹೇಳುವವನ ವಾಕ್ಯ ಯಾರವು ಅವರನ್ನು ಸಮ್ಮುಖದಲ್ಲಿ ಇಟ್ಟುಕೊಳ್ಳಿ. ವ್ಯಕ್ತದಲ್ಲಿ ಅವ್ಯಕ್ತ ತಂದೆ ಮತ್ತು ನಿರಾಕಾರಿ ತಂದೆಯನ್ನು ನೋಡಿ, ಹಾಗಾದರೆ ಯಾವ ಪರಿವರ್ತನೆಯನ್ನು ಮಾಡುವುದು ಎಂದು ತಿಳಿಯಿತೇ? ಮುಂದುವರೆಯೋಣ ಅಧ್ಯಯನವನ್ನೂ ಮಾಡಿದ್ದಾಯಿತು. ಈಗ ಏನು ಮಾಡುವುದು? ಈಗ ಸೇವೆಯ ಪಾತ್ರ ಬಂದಿತು.

ಸೇವೆಯಲ್ಲಿ ಯಾವುದೇ ಪ್ರಕಾರದ ಸೇವೆ - ಪ್ರವೃತ್ತಿಯದಾಗಿರಲಿ ವ್ಯವಹಾರದ್ದಾಗಿರಲಿ, ಈಶ್ವರೀಯ ಸೇವೆಯಾಗಿರಲಿ, ಪ್ರವೃತ್ತಿ ಲೌಕಿಕ ಸಂಬಂಧಪಟ್ಟದ್ದಾಗಿರಲಿ, ಕರ್ಮಬಂಧನದ ಆಧಾರದಿಂದ ಸಂಬಂಧದ್ದಾಗಿರಲಿ. ಆದರೆ ಪ್ರವೃತ್ತಿಯಲ್ಲಿ ಸೇವೆ ಮಾಡುತ್ತಾ ಪರಿವರ್ತನೆಯ ಈ ಸಂಕಲ್ಪವನ್ನು ಮಾಡಿ – ಮರಜೀವ ಜನ್ಮವಾಯಿತು ಎಂದರೆ ಲೌಕಿಕ ಕರ್ಮಬಂಧನ ಸಮಾಪ್ತಿಯಾಯಿತು. ಕರ್ಮಬಂಧನ ಎಂದು ತಿಳಿದು ನಡೆಯಬೇಡಿ. ಕರ್ಮಬಂಧನ, ಕರ್ಮಬಂಧನ ಎಂದು ಯೋಚಿಸುವುದರಿಂದ ಮತ್ತು ಹೇಳುವುದರಿಂದ ಬಂಧಿಸಲ್ಪಡುತ್ತೀರಿ. ಆದರೆ ಈ ಲೌಕಿಕ ಕರ್ಮಬಂಧನದ ಸಂಬಂಧ ಈಗ ಮರಜೀವ ಜನ್ಮದ ಕಾರಣ ಶ್ರೀಮತದ ಆಧಾರದಂತೆ ಸೇವೆಯ ಸಂಬಂಧದ ಆಧಾರವಾಗಿದೆ. ಕರ್ಮಬಂಧನವಲ್ಲ, ಸೇವೆಯ ಆಧಾರದ ವಾಗಿದೆ. ಸೇವೆಯ ಸಂಬಂಧದಲ್ಲಿ ವಿಭಿನ್ನ ಪ್ರಕಾರದ ಆತ್ಮರು ಜ್ಞಾನದ ಧಾರಣೆ ಮಾಡಿ, ಸೇವೆಯ ಸಂಬಂಧವೆಂದು ತಿಳಿದು ನಡೆದರೆ ಬಂಧನದಲ್ಲಿ ತೊಂದರೆ ಪಡುವುದಿಲ್ಲ. ಆದರೆ ಅತಿ ಪಾಪಾತ್ಮ, ಅತಿ ಅಪಕಾರಿ ಆತ್ಮ, ಕೊಕ್ಕರೆಯ ಮೇಲೆಯೂ ತಿರಸ್ಕಾರ ಬೇಡ, ದ್ವೇಷ ಬೇಡ, ನಿರಾದರ ಬೇಡ ಆದರೆ ವಿಶ್ವಕಲ್ಯಾಣಕಾರಿ ಸ್ಥಿತಿಯಲ್ಲಿ ಸ್ಥಿತರಾಗಿ ದಯಾಹೃದಯಿಗಳಾಗಿ ಕರುಣೆಯ ಭಾವನೆಯಿಟ್ಟುಕೊಂಡು, ಸೇವೆಯ ಸಂಬಂಧವೆಂದು ತಿಳಿದು ಸೇವೆ ಮಾಡಿರಿ ಮತ್ತು ಎಷ್ಟು ಆಶಾಹೀನರ ಸೇವೆ ಮಾಡುವಿರೋ ಅಷ್ಟು ಬಹುಮಾನದ ಅಧಿಕಾರಿಗಳಾಗುವಿರಿ. ಪ್ರಸಿದ್ಧ ವಿಶ್ವಕಲ್ಯಾಣಕಾರಿ ಎಂದು ಗಾಯನ ಮಾಡಲ್ಪಡುವಿರಿ. ಶಾಂತಿದೂತ ಎಂಬ ಸನ್ಮಾನ ಪಡೆಯುವಿರಿ. ಆದ್ದರಿಂದ ಪ್ರವೃತ್ತಿಯಲ್ಲಿ ಕರ್ಮ ಬಂಧನದ ಬದಲಿಗೆ ಸೇವೆಯ ಸಂಬಂಧವಿದೆ - ಈ ಪರಿವರ್ತನೆಯ ಸಂಕಲ್ಪ ಮಾಡಿ, ಆದರೆ ಸೇವೆ ಮಾಡುತ್ತಾ ಮೋಹದಲ್ಲಿ ಬರಬೇಡಿ. ಒಮ್ಮೊಮ್ಮೆ ವೈದ್ಯರೂ ರೋಗಿಯಲ್ಲಿ ಆಸಕ್ತರಾಗುತ್ತಾರೆ.

ಸೇವೆಯ ಸಂಬಂಧ ಎಂದರೆ ತ್ಯಾಗ ಮತ್ತು ತಪಸ್ವಿ ರೂಪ. ಸತ್ಯ ಸೇವೆಯ ಲಕ್ಷಣವೇ ಈ ತ್ಯಾಗ ಮತ್ತು ತಪಸ್ಸು ಅದೇ ರೀತಿ ವ್ಯವಹಾರದಲ್ಲಿಯೂ ಆದೇಶದನುಸಾರ ನಿಮಿತ್ತ ಮಾತ್ರ ಶರೀರ ನಿರ್ವಹಣೆ ಆದರೆ ಮೂಲ ಆಧಾರ ಆತ್ಮನ ನಿರ್ವಹಣೆ. ಶರೀರ ನಿರ್ವಹಣೆಗಾಗಿ ಆತ್ಮನ ನಿರ್ವಹಣೆ ಮರೆಯಬಾರದು. ವ್ಯವಹಾರ ಮಾಡುತ್ತಾ ಶರೀರ ನಿರ್ವಹಣೆ ಮತ್ತು ಆತ್ಮ ನಿರ್ವಹಣೆ ಎರಡರ ಸಂತುಲತೆಯಿರಲಿ, ಇಲ್ಲದಿದ್ದರೆ ಮಾಯೆ ಬಲಿಯಾಗುತ್ತದೆ. ಎಷ್ಟು ದೊಡ್ಡದಾಗಿಸುವಿರೋ ಅಷ್ಟು ಅದರಲ್ಲಿ ಸಿಕ್ಕಿಹಾಕಿಕೊಳ್ಳುವಂತಹ ಬಲೆಯಾಗುತ್ತದೆ. ಧನದ ವೃದ್ಧಿ ಮಾಡುತ್ತಲೂ ನೆನಪಿನ ವಿಧಿಯನ್ನು ಮರೆಯಬಾರದು. ನೆನಪಿನ ವಿಧಿ ಮತ್ತು ಧನದ ವೃದ್ಧಿ ಎರಡೂ ಜೊತೆಗೆ ಇರಬೇಕು. ಧನದ ವೃದ್ಧಿಗಾಗಿ ವಿಧಿಯನ್ನು ಬಿಡಬಾರದು. ಲೌಕಿಕ ಸ್ಥೂಲ ಕರ್ಮವನ್ನು, ಕರ್ಮಯೋಗಿಯ

ಸ್ಥಿತಿಯಲ್ಲಿ ಪರಿವರ್ತನೆ ಮಾಡುವುದು ಎಂದು ಇದನ್ನು ಕರೆಯಲಾಗುತ್ತದೆ. ಕೇವಲ ಕರ್ಮ ಮಾಡುವವರಲ್ಲ ಆದರೆ ಕರ್ಮಯೋಗಿಯಾಗಿದ್ದೀರಿ. ಕರ್ಮ ಎಂದರೆ ವ್ಯವಹಾರ, ಯೋಗ ಎಂದರೆ ಪರಮಾರ್ಥ, ಪರಮಾರ್ಥ ಎಂದರೆ ಪರಮಪಿತನ ಸೇವೆಗಾಗಿ ಮಾಡುತ್ತಿರುವಿರಿ. ಆದ್ದರಿಂದ ವ್ಯವಹಾರ ಮತ್ತು ಪರಮಾರ್ಥ ಎರಡೂ ಜೊತೆಗಿರಲಿ ಇವರನ್ನು ಶ್ರೀಮತದಂತೆ ನಡೆಯುವಂತಹ ಕರ್ಮಯೋಗಿ ಎಂದು ಕರೆಯುತ್ತಾರೆ. ವ್ಯವಹಾರದ ಸಮಯದಲ್ಲಿ ಯಾವ ಪರಿವರ್ತನೆ ಮಾಡಬೇಕು? ನಾನು ಕೇವಲ ವ್ಯವಹಾರಿಯಲ್ಲ, ಆದರೆ ವ್ಯಾವಹಾರಿ ಮತ್ತು ಪಾರಮಾರ್ಥಿ ಎಂದರೆ ಏನನ್ನು ಮಾಡುತ್ತಿರುವೆನೋ ಅದು ಈಶ್ವರೀಯ ಸೇವೆಗಾಗಿ ಮಾಡುತ್ತಿದ್ದೇನೆ. ವ್ಯವಹಾರಿ ಮತ್ತು ಪಾರಮಾರ್ಥಿ ಸಂಯುಕ್ತವಾಗಿದ್ದೇನೆ . ಇದೇ ಪರಿವರ್ತನೆಯ ಅವಿನಾಶಿ ಸಂಕಲ್ಪ ಸದಾ ಸ್ಮೃತಿಯಲ್ಲಿದ್ದರೆ ಮನ ಮತ್ತು ತನು ಡಬಲ್ ಸಂಪಾದನೆ ಮಾಡುತ್ತವೆ. ಸ್ಥೂಲ ಧನವೂ ಬರುವುದು ಮತ್ತು ಮನದಿಂದ ಸಂಪಾದನೆಯಾಗುವುದು. ಒಂದೇ ತನುವಿನಿಂದ, ಒಂದೇ ಸಮಯದಲ್ಲಿ ಮನ ಮತ್ತು ಧನದ ಡಬಲ್ ಸಂಪಾದನೆ ಆಗುತ್ತಿರುವುದು. ಆದ್ದರಿಂದ ಸದಾ ನಾನು ಡಬಲ್ ಸಂಪಾದನೆ ಮಾಡುವವನು ಎಂಬುದು ನೆನಪಿರಲಿ. ಈ ಈಶ್ವರೀಯ ಸೇವೆಯಲ್ಲಿ ಸದಾ ನಿಮಿತ್ತ ಮಾತ್ರದ ಮಂತ್ರ ಅಥವಾ ಮಾಡಿಸುವವನ ಸ್ಮೃತಿ, ಸಂಕಲ್ಪ ಸದಾ ನೆನಪಿರಲಿ, ಮಾಡಿಸುವವನನ್ನು ಮರೆಯಬಾರದು. ಆಗ ಸೇವೆಯಲ್ಲಿ ಸದಾ ನಿರ್ಮಾಣವನ್ನೇ ಮಾಡುವಿರಿ. ಒಳ್ಳೆಯದು .... ಮತ್ತೆ ಮುಂದೆ ನಡೆಯಿರಿ- ಮುಂದುವರೆದು ಅನೇಕ ಪ್ರಕಾರದ ವ್ಯಕ್ತಿ ಮತ್ತು ವೈಭವ ಮತ್ತು ಅನೇಕ ಪ್ರಕಾರದ ವಸ್ತುಗಳ ಸಂಪರ್ಕದಲ್ಲಿ ಬರುತ್ತೀರಿ. ಇದರಲ್ಲಿಯೂ ಸದಾ ವ್ಯಕ್ತಿಯಲ್ಲಿ ವ್ಯಕ್ತ ಭಾವದ ಬದಲಾಗಿ ಆತ್ಮಿಕ ಭಾವ ಧಾರಣೆ ಮಾಡಿ, ವಸ್ತುಗಳು ಮತ್ತು ವೈಭವದಲ್ಲಿ ಅನಾಸಕ್ತ ಭಾವವನ್ನು ಧಾರಣೆ ಮಾಡಿ ಆಗ ವೈಭವ ಮತ್ತು ವಸ್ತು ಅನಾಸಕ್ತರ ಮುಂದೆ ದಾಸಿಯ ರೂಪದಲ್ಲಿರುವವು ಮತ್ತು ಆಸಕ್ತ ಭಾವದವರ ಮುಂದೆ ಚುಂಬಕದಂತೆ ಸಿಕ್ಕಿಸಿ ಹಾಕುವಂತಿರುವವು. ಬಿಡಿಸಿಕೊಳ್ಳಲು ಬಯಸಿದರೂ ಬಿಡುವುದಿಲ್ಲ. ಆದ್ದರಿಂದ ವ್ಯಕ್ತಿ ಮತ್ತು ವೈಭವದಲ್ಲಿ ಆತ್ಮಭಾವ ಮತ್ತು ಅನಾಸಕ್ತ ಭಾವದ ಪರಿವರ್ತನೆ ಮಾಡಿ. ಮತ್ತೆ ಮುಂದೆ ನಡೆಯಿರಿ- ಯಾವುದೇ ಹಳೆಯ ಜಗತ್ತಿನ ಆಕರ್ಷಣಮಯ ದೃಶ್ಯ ಅಲ್ಪಕಾಲದ ಸುಖದ ಸಾಧನ ಉಪಯೋಗಿಸುತ್ತೀರಿ ಅಥವಾ ನೋಡುತ್ತೀರಿ ಆಗ ಆ ಸಾಧನಗಳು ಅಥವಾ ದೃಶ್ಯವನ್ನು ನೋಡಿ ಅಲ್ಲಲ್ಲಿ ಸಾಧನೆಯನ್ನು ಮರೆತು ಸಾಧನಗಳಲ್ಲಿ ಬರುತ್ತೀರಿ. ಸಾಧನೆಗಳಿಗೆ ವಶೀಭೂತರಾಗುತ್ತೀರಿ. ಸಾಧನಗಳ ಆಧಾರದ ಮೇಲೆ ಸಾಧನೆ ಎಂದರೆ ಮರಳಿನ ಅಡಿಪಾಯದ ಮೇಲೆ ಕಟ್ಟಡವನ್ನು ಕಟ್ಟುವಂತೆ ಎಂದು ತಿಳಿಯಿರಿ. ಅದರ ಗತಿಯೇನು? ಬಾರಿಬಾರಿ ಅಲ್ಲೋಲ ಕಲ್ಲೋಲವಾಗುವುದರಿಂದ ತತ್ತರಿಸಿ ಹೋಗುವಿರಿ. ಬಿದ್ದಿರುವಂತಹ ಸ್ಥಿತಿಯಾಗುವುದು. ಆದ್ದರಿಂದ **ಸಾಧನಗಳು ವಿನಾಶಿ ಮತ್ತು ಸಾಧನೆ ಅವಿನಾಶಿ** ಎಂಬ ಪರಿವರ್ತನೆಯನ್ನು ಮಾಡಿಕೊಳ್ಳಿ. ವಿನಾಶಿ ಸಾಧನಗಳ ಆಧಾರದ ಮೇಲೆ ಅವಿನಾಶಿ ಸಾಧನೆಯಾಗಲಾರದು. ಸಾಧನಗಳು ನಿಮಿತ್ತ ಮಾತ್ರ ಸಾಧನೆಯು ನಿರ್ಮಾಣದ ಆಧಾರವಾಗಿದೆ. ಆದ್ದರಿಂದ ಸಾಧನಗಳಿಗೆ ಮಹತ್ವ ಕೊಡದೇ ಸಾಧನೆಗೆ ಮಹತ್ವವನ್ನು ಕೊಡಿ. ಆದ್ದರಿಂದ ಸದಾ ನಾನು ಸಿದ್ಧಿ ಸ್ವರೂಪ ನಾಗಿದ್ದೇನೆಯೇ ಹೊರತು ಸಾಧನ ಸ್ವರೂಪನಲ್ಲ. ಸಾಧನೆ ಸಿದ್ಧಿಯನ್ನು ಪ್ರಾಪ್ತಿ ಮಾಡಿಸುವುದು. ಸಾಧನೆಗಳ ಆಕರ್ಷಣೆಯಲ್ಲಿ ಸಿದ್ಧಿ ಸ್ವರೂಪವನ್ನು ಮರೆಯಬೇಡಿ. ಪ್ರತಿಯೊಂದು ಲೌಕಿಕ ವಸ್ತುವನ್ನು ನೋಡಿ, ಲೌಕಿಕ ಮಾತುಗಳನ್ನು ಕೇಳಿ, ಲೌಕಿಕ ದೃಶ್ಯವನ್ನು ಮಾಡಿ ನೋಡಿ, ಲೌಕಿಕವನ್ನು ಅಲೌಕಿಕದಲ್ಲಿ ಪರಿವರ್ತನೆ ಎಂದರೆ ಜ್ಞಾನಸ್ವರೂಪರಾಗಿ ಪ್ರತಿಯೊಂದು ಮಾತಿನಿಂದ ಜ್ಞಾನವನ್ನು ಗ್ರಹಿಸಿ, ಮಾತಿನಲ್ಲಿ ಹೋಗದೇ ಜ್ಞಾನದಲ್ಲಿ ಹೋಗಿ, ಯಾವ ಪರಿವರ್ತನೆ ಮಾಡಬೇಕು ಎಂಬುದು ತಿಳಿಯಿತೇ? ಮತ್ತೆ ಮುಂದೆ ನಡೆಯಿರಿ- ಇನ್ನೇನು ಉಳಿಯಿತು? ಈಗ ನಿದ್ರಿಸುವುದು ಉಳಿಯಿತು. ಸ್ವರ್ಣಿಮ ಜಗತ್ತಿನಲ್ಲಿ ನಿದ್ರಿಸುವುದು. ನಿದ್ರಿಸುವುದನ್ನೂ ಪರಿವರ್ತನೆ ಮಾಡಿ. ಹಾಸಿಗೆಯ ಮೇಲೆ ನಿದ್ರಿಸಬೇಡಿ. ಆದರೆ ಎಲ್ಲಿ ನಿದ್ರಿಸುವಿರಿ? ತಂದೆಯ ನೆನಪಿನ ಮಡಿಲಲ್ಲಿ ನಿದ್ರಿಸಿ. ಫರಿಶ್ತೆಗಳ ಪ್ರಪಂಚದಲ್ಲಿ ಸ್ವಪ್ನಗಳಲ್ಲಿ ತಿರುಗಾಡಿ. ಆದ್ದರಿಂದ ಸ್ವಪ್ನಗಳನ್ನೂ ಪರಿವರ್ತನೆ ಮಾಡಿ ಮತ್ತು ನಿದ್ರೆಯನ್ನೂ ಪರಿವರ್ತನೆ ಮಾಡಿ. ಆದಿಯಿಂದ ಅಂತ್ಯದವರೆಗೆ ಪರಿವರ್ತನೆ ಮಾಡಿ. ಪರಿವರ್ತನಾ ಶಕ್ತಿಯನ್ನು ಹೇಗೆ ಉಪಯೋಗಿಸುವುದು ಎಂದು ತಿಳಿಯಿತೇ?

ಈ ಹೊಸ ವರ್ಷಕ್ಕೆ ಕಾಣಿಕೆ ಪರಿವರ್ತನೆಯ ಶಕ್ತಿಯ ಉಡುಗೊರೆಯಾಗಿದೆ. ಸ್ವಪರಿವರ್ತನೆ ಮತ್ತು ವಿಶ್ವಪರಿವರ್ತನೆಯ ಈ ಉಡುಗೊರೆಯ ಲಿಸ್ಟ್ ನಿಂದ ವಿಶ್ವ ಪರಿವರ್ತನೆಯ ಸಮಯವನ್ನು ಸಮೀಪ ತರುವಿರಿ. ಹೊಸ ವರ್ಷದ ಶುಭಾಶಯಗಳನ್ನು ಎಲ್ಲರೂ ಕೊಡುತ್ತಾರೆ ಆದರೆ ಬಾಪ್ ದಾದಾ ಹೊಸ ವರ್ಷದಲ್ಲಿ ಹೊಸತನದಿಂದ ಸದಾ ತೀವ್ರ ಪುರುಷಾರ್ಥಿಗಳಾಗಲು ಮುಂಚಿತವಾಗಿ ಅಭಿನಂದನೆಗಳನ್ನು ಕೊಡುತ್ತಿದ್ದಾರೆ. ಹೊಸ ವರ್ಷ, ಹೊಸ ಸಂಸ್ಕಾರ, ಹೊಸ ಸ್ವಭಾವ, ಹೊಸ ಉತ್ಸಾಹ-ಉಲ್ಲಾಸ, ವಿಶ್ವವನ್ನು ನವೀನಗೊಳಿಸುವ ಶ್ರೇಷ್ಠ ಸಂಕಲ್ಪ, ಸರ್ವರಿಗೆ ಮುಕ್ತಿ-ಜೀವನ್ಮುಕ್ತಿಯ ವರದಾನ ಕೊಡುವ ಸದಾ ಶ್ರೇಷ್ಠ ಸಂಕಲ್ಪ, ಈ ರೀತಿಯ ನವೀನತೆಗೆ ಅಭಿನಂದನೆಗಳು, ಶುಭಾಶಯಗಳು. ಹಳೆಯ ಸಂಸ್ಕಾರಗಳು, ಹಳೆಯ ನಡತೆ, ಹಳೆಯ ವಿಧಿ, ಹಳೆಯದಕ್ಕೆ ವಿದಾಯದ ಅಭಿನಂದನೆಗಳು. ಒಳ್ಳೆಯದು.

ಈ ರೀತಿ ಪ್ರತಿಯೊಂದು ಕರ್ಮದಲ್ಲಿ ಪರಿವರ್ತನೆಯ ಶಕ್ತಿಯಿಂದ ಸ್ವಪರಿವರ್ತನೆ ಮತ್ತು ವಿಶ್ವಪರಿವರ್ತನೆ ಮಾಡುವಂತಹ, ಪ್ರತಿ ಕ್ಷಣ, ಪ್ರತಿ ಸಂಕಲ್ಪ, ಹೊಸ ಎಂದರೆ ಸುವರ್ಣಯುಗವನ್ನು ತರುವಂತಹ ಶ್ರೇಷ್ಠ ಎಂದರೆ ಸತೋಪ್ರಧಾನ ಮಾಡುವಂತಹ, ಹೊಸ ವರ್ಷದ ಸೇವೆಯಲ್ಲಿ ಮತ್ತು ವಿಶ್ವದಲ್ಲಿ ಹೊಸ ಚಮತ್ಕಾರ ತೋರಿಸುವಂತಹ, ಸರ್ವರ ಪ್ರತಿ ಅಥವಾ ವಿಶ್ವದ ಪ್ರತಿ ಯಾವುದನ್ನು ಇಲ್ಲಿಯವರೆಗೆ ಅಸಂಭವವೆಂದು ತಿಳಿದಿರುವರೋ ಅದನ್ನು ಸಂಭವ ಮಾಡುವಂತಹ, ಸದಾ ಸಫಲತೆಯ ಮೂರ್ತಿ, ಶ್ರೇಷ್ಠ ಸಿದ್ಧಿ ಸ್ವರೂಪ ಆತ್ಮರಿಗೆ ಬಾಪ್ ದಾದಾರ ನೆನಪು- ಪ್ರೀತಿ ಮತ್ತು ನಮಸ್ತೆ.

ಅವ್ಯಕ್ತ ಮುರಳಿ 31-12-1970.

**ಅಮೃತ ವೇಳೆಯಿಂದ ಪರಿವರ್ತನಾ ಶಕ್ತಿಯ ಪ್ರಯೋಗ**

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ, ಶಿವ ಪರಮಾತ್ಮ ನಾನು ಕಂಬೈನ್ಡ್ ಸ್ವರೂಪ.

1. ನಾನು ಭವಿಷ್ಯದ ರಾಜ್ಯಾಧಿಕಾರಿ ಮತ್ತು ವಿಶ್ವಕಲ್ಯಾಣಕಾರಿ.

2. "ನಾನು ಶರೀರವಲ್ಲ, ಆತ್ಮನಾಗಿದ್ದೇನೆ ಮತ್ತು ಬ್ರಾಹ್ಮಣ ಆತ್ಮನಾದ ನಾನು ಅವತರಿಸಿದ್ದೇನೆ" ಎಂಬ ಸಂಕಲ್ಪದಿಂದ ಪ್ರತಿಯೊಂದು ದಿನವನ್ನು ಆರಂಭ ಮಾಡಿದ್ದೇನೆ.

3. ನಾನು ಅಮೂಲ್ಯ ಚೈತನ್ಯ ಮೂರ್ತಿಯಾಗಿದ್ದೇನೆ ಮತ್ತು ಈ ದೇಹ ಅಮೂಲ್ಯವಾದ ಮಂದಿರವಾಗಿದೆ ಎಂಬ ಭಾವನೆಯಿಂದ ಟ್ರಸ್ಟಿಯಾಗಿ ಮಂದಿರವನ್ನು ಶೃಂಗರಿಸಿದ್ದೇನೆ.

4. ನಾನು ಪ್ರತಿಕ್ಷಣ ಅಧ್ಯಯನ & ಪ್ರತಿಯೊಂದು ಅಮೂಲ್ಯ ಮಾತಿನ ಧಾರಣೆ ಮಾಡಿರುವ ಈಶ್ವರೀಯ ವಿದ್ಯಾರ್ಥಿಯಾಗಿದ್ದೇನೆ.

5. ನಾನು ಭಗವಂತನ ವಿಶೇಷ ಮುದ್ದಿನ ವಿದ್ಯಾರ್ಥಿಯಾಗಿದ್ದೇನೆ.

6. ನಾನು ವ್ಯಕ್ತದಲ್ಲಿ ಅವ್ಯಕ್ತ ತಂದೆ ಮತ್ತು ನಿರಾಕಾರಿ ತಂದೆಯನ್ನು ನೋಡುವ ಪರಿವರ್ತನಾ ಸ್ವರೂಪ.

7. ನಾನು ಯಾವುದೇ ಪ್ರಕಾರದ ಸೇವೆ, ಪ್ರವೃತ್ತಿ, ವ್ಯವಹಾರ, ಈಶ್ವರೀಯ ಸೇವೆ ಅಥವಾ ಲೌಕಿಕಕ್ಕೆ ಸಂಬಂಧಪಟ್ಟದ್ದಾಗಲಿ ಎಲ್ಲಾ ಕರ್ಮ ಬಂಧನಗಳನ್ನು ವಿಶ್ವಕಲ್ಯಾಣಕಾರಿ ಸ್ಥಿತಿಯಲ್ಲಿ ಸ್ಥಿತವಾಗಿ, ದಯಾ ಹೃದಯಿಯಾಗಿ, ಕರುಣೆಯ ಭಾವನೆಯಿಂದ ಸೇವೆಯನ್ನು ಮಾಡಿ ಕರ್ಮ ಸಂಬಂಧದಲ್ಲಿ ಪರಿವರ್ತನೆ ಮಾಡಿಕೊಂಡಿದ್ದೇನೆ.

8. ನಾನು ಶರೀರ ನಿರ್ವಹಣೆ ಮತ್ತು ಆತ್ಮ ನಿರ್ವಹಣೆ ಎರಡರ ಸಂತುಲನೆಯನ್ನು ಮಾಡಿದ್ದೇನೆ.

9. ನಾನು ಕರ್ಮಯೋಗಿ ಅರ್ಥಾತ್ ವ್ಯವಹಾರಿ ಮತ್ತು ಪಾರಮಾರ್ಥಿ.

10. "ನಾನು ಸಾಧನಗಳು ವಿನಾಶಿ ಮತ್ತು ಸಾಧನೆ ಅವಿನಾಶಿ" ಎಂಬ ಪರಿವರ್ತನೆಯನ್ನು ಮಾಡಿಕೊಂಡಿದ್ದೇನೆ.

11. ನಾನು ಪ್ರತಿಯೊಂದು ಲೌಕಿಕ ಮಾತಿನಿಂದಲೂ ಜ್ಞಾನವನ್ನೇ ಗ್ರಹಿಸಿದ್ದೇನೆ. ಅರ್ಥಾತ್ ಲೌಕಿಕವನ್ನು ಅಲೌಕಿಕಕ್ಕೆ ಪರಿವರ್ತನೆ ಮಾಡಿಕೊಂಡಿದ್ದೇನೆ.

12. ನಾನು ತಂದೆಯ ನೆನಪಿನ ಮಡಿಲಿನಲ್ಲಿ ನಿದ್ರಿಸಿದ್ದೇನೆ. ಮತ್ತು ಫರಿಶ್ತಾಗಳ ಪ್ರಪಂಚದಲ್ಲಿ ಸ್ವಪ್ನಗಳನ್ನು ಪರಿವರ್ತನೆ ಮಾಡಿದ್ದೇನೆ.

13. ನಾನು ಸ್ವಪರಿವರ್ತನೆಯ ಶಕ್ತಿಯಿಂದ ವಿಶ್ವ ಪರಿವರ್ತನೆಯನ್ನು ಮಾಡಿದ್ದೇನೆ.

14. ನಾನು ಅಸಂಭವವನ್ನು ಸಂಭವ ಮಾಡಿದ್ದೇನೆ.